ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

34

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 9/9/2020

# ಕೆಎಎಸ್ ಪಟ್ಟಿ ಏರುಪೇರು


9-9-2020

■ ವಿಕ ಸುದ್ದಿಲೋಕ ಬೆಂಗಳೂರು

1998 ಹಾಗೂ 1999ನೇ ಸಾಲಿನ ಕೆಎಎಸ್ ಅಧಿಕಾರಿಗಳ ನೇಮಕ ವಿಚಾರಕ್ಕೆ ಸಂಬಂಧಿಸಿ ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿ (ಕೆಎಟಿ) ಮಂಗಳವಾರ ಮಹತ್ವದ ತೀರ್ಪು ನೀಡಿದೆ. ಕರ್ನಾಟಕ ಲೋಕಸೇವಾ ಆಯೋಗ 2019ರ ಜ.25 ಹಾಗೂ ಆ.22ರಂದು ಪ್ರಕಟಿಸಿದ್ದ ಎರಡೂ ಆಯ್ಕೆ ಪಟ್ಟಿಗಳನ್ನು ಅನೂರ್ಜಿತಗೊಳಿಸಿದೆ. ಅಲ್ಲದೆ, ಹಿಂದೆ 2002ರಲ್ಲಿ ಅಂದಿನ ನ್ಯಾ. ಆರ್.ವಿ.ರವೀಂದ್ರನ್ ಅವರಿದ್ದ ನ್ಯಾಯಪೀಠ ನೀಡಿದ್ದ ಆದೇಶದಂತೆ ಕೆಪಿಎಸ್‌ಸಿ ಹೊಸದಾಗಿ ಆಯ್ಕೆ ಪಟ್ಟಿ ಪ್ರಕಟಿಸಬೇಕು ಎಂದು ಆದೇಶಿಸಿದೆ.

ಈ ಆದೇಶ ಜಾರಿಯಾದರೆ ಇಡೀ ಆಯ್ಕೆ ಪಟ್ಟಿಯಲ್ಲಿ ಮತ್ತೆ ಏರುಪೇರಾಗಲಿದ್ದು, ಹೈಕೋರ್ಟ್ ಆದೇಶದ ನಂತರ ಆಗಿರುವ ಅಧಿಕಾರಿಗಳ ಸ್ಥಾನಪಲ್ಲಟ, ಇಲಾಖಾ ಬದಲಾವಣೆ, ಹಿಂಬಡ್ತಿ-ಮುಂಬಡ್ತಿ ಸೇರಿ ಒಟ್ಟಾರೆ ಎರಡೂ ಬ್ಯಾಚ್‌ಗಳಲ್ಲಿ ಮಹತ್ವದ ಬದಲಾವಣೆಗಳಾಗಲಿವೆ. »05

**ಹೊಸ ಪಟ್ಟಿ ಪ್ರಕಟಿಸಲು ಆಯೋಗಕ್ಕೆ ಕೆಎಟಿ ನಿರ್ದೇಶನ**



**98, 99ರ ಕೆಎಎಸ್ ನೇಮಕ ಅನೂರ್ಜಿತ ಎಂದ ಕೆಎಟಿ**

# ಕೆಎಎಸ್ ಪಟ್ಟಿ ಏರುಪೇರು

» ಮೊದಲ ಪುಟದಿಂದ

ಎಸ್.ಎಸ್. ಮಧುಕೇಶ್ವರ್ ಮತ್ತಿತರರು ಸಲ್ಲಿಸಿದ್ದ ಅರ್ಜಿಗಳ ಮನವಿ ಆಲಿಸಿ ತೀರ್ಪು ಕಾಯ್ದಿರಿಸಿದ್ದ ಕೆಎಟಿ ಅಧ್ಯಕ್ಷ ಡಾ.ಕೆ.ಭಕ್ತವತ್ಸಲ ಮತ್ತು ಸದಸ್ಯ ಎಸ್.ಕೆ.ಪಟ್ನಾಯಕ್ ಅವರಿದ್ದ ನ್ಯಾಯಪೀಠ ಈ ತೀರ್ಪು ಪ್ರಕಟಿಸಿದೆ.

2016ರಲ್ಲಿ ಹೈಕೋರ್ಟ್ ನೀಡಿದ್ದ ತೀರ್ಪಿನ ಒಂದನೇ ಅಂಶವನ್ನು ಸರಕಾರ ಜಾರಿಗೊಳಿಸಿಲ್ಲ, ಅದರಿಂದ ಹೊರಬರಲು ಸರಕಾರ ಹೊಸ ಕಾಯಿದೆಯನ್ನು ಜಾರಿಗೊಳಿಸಿದೆ. ಅಲ್ಲದೆ, ಎರಡು ಮತ್ತು ಮೂರನೇ ಮೌಲ್ಯಮಾಪನದ ಅಂಕಗಳಲ್ಲಿ 20ಕ್ಕಿಂತ ಹೆಚ್ಚು ಕಡಿಮೆ ವ್ಯತ್ಯಾಸ ಬಂದರೆ ಅಂಥವರ ಪತ್ರಿಕೆಗಳನ್ನು ಮೂರನೇ ಮೌಲ್ಯಮಾಪನಕ್ಕೆ ಒಪ್ಪಿಸಬೇಕು ಎಂದು ನೀಡಿದ್ದ ಆದೇಶ ಪಾಲನೆ ಮಾಡಿಲ್ಲ ಎಂದು ಅರ್ಜಿದಾರರು ಕೋರಿದ್ದರು.

ಹೈಕೋರ್ಟ್ ಆದೇಶದಂತೆ 91 ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನದ ಅಂಕ ಪರಿಗಣಿಸಬೇಕಿತ್ತು. ಆದರೆ, 91 ಅಭ್ಯರ್ಥಿಗಳ ಅಂಕಗಳನ್ನು ಪರಿಗಣಿಸಲಾಗಿದೆ ಎಂದು ನ್ಯಾಯಪೀಠಕ್ಕೆ ತಿಳಿಸಿದ್ದರು. ಇದಕ್ಕೆ ಕೆಪಿಎಸ್‌ಸಿ "ಮೊದಲಿಗೆ ಹೈಕೋರ್ಟ್ ಆದೇಶದಂತೆ ಸಿದ್ಧಪಡಿಸಿರುವ ಆಯ್ಕೆಪಟ್ಟಿಗಳನ್ನು ಹೈಕೋರ್ಟ್ ಒಪ್ಪಿದೆ. ಅನಂತರ ಸುಪ್ರೀಂಕೋರ್ಟ್ ಕೂಡ ಅದನ್ನು ಅನುಮೋದಿಸಿದೆ. ಹಾಗಾಗಿ, ಅಭ್ಯರ್ಥಿಗಳು ಕೆಎಟಿ ಮುಂದೆ ತಮ್ಮ ಕುಂದುಕೊರತೆ ಮಂಡಿಸಲು ಅವಕಾಶವಿಲ್ಲ" ಎಂದು ಹೇಳಿತ್ತು. ಹೈಕೋರ್ಟ್ 2016ರಲ್ಲಿ ನೀಡಿರುವ ತೀರ್ಪನ್ನು ಸುಪ್ರೀಂಕೋರ್ಟ್ ಎತ್ತಿಹಿಡಿದಿದೆ.

ಹೈಕೋರ್ಟ್ ತೀರ್ಪಿನ ವಿರುದ್ಧ ಸಲ್ಲಿಸಿದ್ದ ಪುನರ್ ಪರಿಶೀಲನಾ ಅರ್ಜಿಗಳನ್ನೂ ಸುಪ್ರೀಂ ಕೋರ್ಟ್ ವಜಾಗೊಳಿಸಿರುವುದರಿಂದ ಅರ್ಜಿದಾರರ ಯಾವುದೇ ವಾದಗಳನ್ನು ಕೆಎಟಿ ಮಾನ್ಯ ಮಾಡಬಾರದು ಎಂದು ಆಯೋಗ ಹೇಳಿತ್ತು. ಸರಕಾರ ಕೂಡ ಕೆಪಿಎಸ್‌ಸಿ ವಾದವನ್ನೇ ಒಪ್ಪಿಕೊಂಡಿತ್ತು. 2002ರಲ್ಲಿ ಅಂದಿನ ನ್ಯಾ. ಆರ್.ವಿ.ರವೀಂದ್ರನ್, ಮಾಡರೇಷನ್ ಮತ್ತು ಸ್ಕೇಲಿಂಗ್ ಪ್ರಕ್ರಿಯೆಯನ್ನು ಮಾಡಿ ಅನಂತರ ಹೊಸದಾಗಿ ಆಯ್ಕೆ ಪಟ್ಟಿಯನ್ನು ಪ್ರಕಟಿಸಿತ್ತು.